## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ.ಜಿ ಪಾಟೀಲ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017**

**ಉತ್ತರಿಸಬೇಕಾದ ದಿನಾಂಕ : 21.09.2021**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ರೈತರಿಗಾಗಿ ಇರುವ ಸಾಲ ಯೋಜನೆಗಳು ಯಾವುವು; ಯಾವ ಯಾವ ಸಾಲಗಳು ಸಹಾಯಧನದಡಿ ಬರುತ್ತವೆ; (ವಿವರ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ರೈತರಿಗೆ ಹೈನುಗಾರಿಕೆಗಾಗಿ ರೂ.2.00 ಲಕ್ಷಗಳವರೆಗೆ ಹಾಗೂ ಅಲ್ಪಾವಧಿ ಬೆಳೆ ಸಾಲ ರೂ.3.00 ಲಕ್ಷದವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ವಿತರಿಸಲಾಗುತ್ತಿದೆ.<br>ಮಧ್ಯಮಾವಧಿ ಕೃಷಿ ಸಾಲವನ್ನು ರೂ.10.00 ಲಕ್ಷದವರೆಗೆ ಶೇ.3 ರ ಬಡ್ಡಿ ದರದಲ್ಲಿ ನೀಡುವ ಯೋಜನೆಗಳಿದ್ದು, ಈ ಯೋಜನೆಗಳಲ್ಲಿ ನೀಡಿದ ಸಾಲವು ನಿಗದಿತ ಅವಧಿಯೊಳಗೆ ವಸೂಲಾದರೆ ಸರ್ಕಾರದ ಬಡ್ಡಿ ಸಹಾಯಧನ ದೊರಕುತ್ತದೆ.</td></tr>
<tr><td>ಆ)</td><td>ಮೇಲ್ಕಂಡ ಜಿಲ್ಲೆಗಳಲ್ಲಿ ಎಷ್ಟು ಜನ ರೈತರುಗಳು ಈ ರೀತಿಯ ಸಾಲವನ್ನು ಪಡೆದಿರುತ್ತಾರೆ; (ವಿವರ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಾಲ ಪಡೆದ ರೈತರ ವಿವರ ಈ ಕೆಳಕಂಡಂತಿದೆ.<br>
<table>
<tr><th rowspan="2">ಕ್ರ ಸಂ</th><th rowspan="2">ಜಿಲ್ಲೆಯ ಹೆಸರು</th><th colspan="2">ದಿ.01-04-2020 ರಿಂದ 31-03-2021 ರ ಅವಧಿಯಲ್ಲಿ ಸಾಲ ಪಡೆದ ರೈತರ ಸಂಖ್ಯೆ</th></tr>
<tr><th>ಅಲ್ಪಾವಧಿ ಕೃಷಿ ಸಾಲ</th><th>ಮಧ್ಯಮಾವಧಿ & ದೀರ್ಘಾವಧಿ ಕೃಷಿ ಸಾಲ</th></tr>
<tr><td>1</td><td>ಕಲಬುರಗಿ</td><td>53,984</td><td>0</td></tr>
<tr><td>2</td><td>ಯಾದಗಿರಿ</td><td>28,251</td><td>0</td></tr>
</table></td></tr>
<tr><td>ಇ)</td><td>ವಾಹನ ಕೊಳ್ಳಲು ರೈತರಿಗೆ ಸಾಲ ಮತ್ತು ಸಬ್ಸಿಡಿಯನ್ನೂ ನೀಡಲಾಗುತ್ತಿದೆಯೇ? (ವಿವರ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶೇ.3 ರ ಬಡ್ಡಿದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆಯಲ್ಲಿ ಕೃಷಿ ಯಂತ್ರೋಪಕರಣಗಳಡಿ ಟ್ರ್ಯಾಕ್ಟರ್ ಹಾಗೂ ಪವರ ಟಿಲ್ಲರ್ ಕೊಳ್ಳಲು ಬಡ್ಡಿಸಹಾಯಧನ ಲಭ್ಯವಿದ್ದು, ಇತರೆ ವಾಹನಗಳಿಗೆ ಲಭ್ಯವಿರುವುದಿಲ್ಲ.<br>ಈ ಹಿಂದೆ ವಿತರಿಸಿದ ಟ್ರ್ಯಾಕ್ಟರ್ ಸಾಲ ರೂ.602.98 ಲಕ್ಷದಷ್ಟು ಸುಸ್ತಿಯಾಗಿರುವುದರಿಂದ ಹಾಗೂ ಬ್ಯಾಂಕಿನಲ್ಲಿ ಪ್ರಸ್ತುತ ಬಂಡವಾಳದ ಕೊರತೆ ಇರುವುದರಿಂದ ವಾಹನಕೊಳ್ಳಲು ರೈತರಿಗೆ ಸಾಲ ವಿತರಿಸಿರುವುದಿಲ್ಲ.</td></tr>
</table>

**ಸಂಖ್ಯೆ: ಸಿಒ 270 ಸಿಎಲ್ಎಸ್ 2021**

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು